**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 24-02-2026:**

**ಮುಂದುವರೆದ ಪಾಟೀಸವಾಲುಃ ಶ್ರೀ ಸಿ ಎನ್ ವಿ ವಕೀಲರಿಂದ ಆರೋಪಿ ಪರವಾಗಿಃ**

ಅನುಬಂಧ- 1 ರಿಂದ 17ನ್ನು ಸಲ್ಲಿಸುವಂತೆ ನಾನು ಆರೋಪಿಗೆ ಲಿಖಿತ ಮೂಲಕ ಕೇಳಿರುತ್ತೇನೆ. ನಾವು ಕಾಣಿಸಿರುವ ಆಸ್ತಿ ಆದಾಯ ಖರ್ಚು ಇದಕ್ಕೆ ಸಂಬಂಧಪಟ್ಟಂತೆ ನಿಮ್ಮ ವಿವರಣೆ ಏನು ಎನ್ನುವ ಬಗ್ಗೆ ಅನುಬಂಧ 1 ರಿಂದ 23ನ್ನು ಕೇಳುವುದು ಎಂದರೆ ನಿಜ. ಅವರು ಅವುಗಳನ್ನು ಹಾಜರುಪಡಿಸಿದ ನಂತರ ಅವುಗಳನ್ನು ಪರಿಶೀಲನೆ ಮಾಡಿ ಅವುಗಳ ಸತ್ಯಾಸತ್ಯತೆಯ ಬಗ್ಗೆ ನಮ್ಮ ವರದಿಯಲ್ಲಿ ನಮೂದು ಮಾಡಬೇಕೆಂದರೆ ಸರಿ. ಅನುಬಂಧ 1 ರಿಂದ 23 ರ ಮೇಲೆ ನಾನು ಯಾವುದೇ ತನಿಖೆ ನಡೆಸಿಲ್ಲ. ಅದೇ ರೀತಿ ಶಾಂತಿನಾಥ ವಣ್ಣೂರು ಸಹ ಆ ಬಗ್ಗೆ ಯಾವುದೇ ತನಿಖೆ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ಅನುಬಂಧ -1 ರಿಂದ 23ನ್ನು ತನಿಖೆ ನಡೆಸಿದ ತನಿಖಾಧಿಕಾರಿ ಈಗ ಬದುಕಿಲ್ಲ ಎಂದರೆ ಸರಿ. ಆರೋಪಿಯು ನೀಡಿರುವ ಅನುಬಂಧ 1 ರಿಂದ 23 ರಲ್ಲಿ ಲೋಕಾಯುಕ್ತದ ಯಾವ ಅಧಿಕಾರಿಯು ಕೂಡ ಉದ್ದೇಶಪೂರ್ವಕವಾಗಿಯೇ ತನಿಖೆ ನಡೆಸಿಲ್ಲ ಎಂದರೆ ನನಗೆ ಹೇಳಲಾಗುವುದಿಲ್ಲ.

2.ಕೆ ಹೆಚ್ ಬಿ ಕಾಲೋನಿಯಲ್ಲಿರುವ ಮನೆಯನ್ನು ಆರೋಪಿತರು ಆಶಾ ಎನ್ನುವವರಿಗೆ ದಾನಪತ್ರ ಮಾಡಿಕೊಟ್ಟಿದ್ದಾರೆ ಎನ್ನುವ ವಿಚಾರ ನನ್ನ ತನಿಖಾ ಕಾಲದಲ್ಲಿ ತಿಳಿದುಬಂತಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ಆರೋಪಿತರ ಹೆಂಡತಿ ನೀಲಗಿರಿ ಎಣ್ಣೆ ವ್ಯಾಪಾರ ಮಾಡುತ್ತಿದ್ದ ವಿಚಾರ ಹಾಗೂ ಕೆಲವು ಜಮೀನುಗಳನ್ನು ಗುತ್ತಿಗೆ ಪಡೆದು ಶುಂಠಿ ಬೆಳೆ ಬೆಳೆದ ವಿಚಾರ ನನ್ನ ತನಿಖಾ ಕಾಲದಲ್ಲಿ ನನಗೆ ತಿಳಿದುಬಂದಿತ್ತಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ಆರೋಪಿತರ ಹೆಂಡತಿಯ ಮತ್ತು ಆರೋಪಿತರ ಕೃಷಿ ಆದಾಯದ ಬಗ್ಗೆ ನಾನು ತನಿಖೆ ಮಾಡಿಲ್ಲ. ಕಟ್ಟಡದ ಮೌಲ್ಯಮಾಪನ ಮಾಡಿದ ಇಂಜಿನಿಯರ್ ರವರಿಗೆ ನಾನು ಯಾವ ವರ್ಷದಲ್ಲಿ ಆ ಕಟ್ಟಡದ ನಿವೇಶನ ಖರೀದಿಸಿದ್ದು ಮತ್ತು ಕಟ್ಟಡ ಯಾವಾಗ ಕಟ್ಟಿದ್ದು ಎಂಬ ಬಗ್ಗೆ ಮಾಹಿತಿ ಕೊಟ್ಟಿದ್ದೇನಾ ಎಂದರೆ ಸಾಕ್ಷಿಯು ನಾವು ಕೊಡುವುದಿಲ್ಲ ಅವರು ಕೊಡುತ್ತಾರೆ ಎನ್ನುತ್ತಾರೆ. ಕಟ್ಟಡದ ಮೌಲ್ಯಮಾಪನವನ್ನು ನಾವು ದಾಳಿ ಮಾಡಿದ ದಿನಾಂಕಕ್ಕೆ ಮಾಡಿಸುವುದು ಎಂದರೆ ಸಾಕ್ಷಿಯು ಅದನ್ನು ಮಾಡುವವರಿಗೆ ಗೊತ್ತು ನಮಗೆ ಗೊತ್ತಿಲ್ಲ ಎನ್ನುತ್ತಾರೆ.

ಆರೋಪಿತರ ಕೌಟುಂಬಿಕ ವೆಚ್ಚದ ಮಾಹಿತಿ ಬಗ್ಗೆ ಅಂಕಿಸಂಖ್ಯೆಗಳನ್ನು ಸಾಂಖ್ಯಿಕ ಇಲಾಖೆಗೆ ಪತ್ರ ಬರೆದಾಗ ಆರೋಪಿತರು ಕೃಷಿ ಜಮೀನನ್ನು ಹೊಂದಿದ್ದಾರೆಯೇ ಅದರಿಂದ ಅವರಿಗೆ ದಿನನಿತ್ಯಕ್ಕೆ ಬೇಕಾದ ಧವಸಧಾನ್ಯಗಳು ಮತ್ತಿತರ ವಸ್ತುಗಳು ಸಿಗುತ್ತವೆಯೇ ಹಾಗೂ ಅವರು ಮಾಂಸಾಹಾರಿಯೇ ಶಾಖಾಹಾರಿಯೇ ಮತ್ತು ಎಲ್ಲ ಅವರ ಹವ್ಯಾಸಗಳ ಬಗ್ಗೆ ಅಭ್ಯಾಸಗಳ ಬಗ್ಗೆ ಮಾಹಿತಿಯನ್ನು ನೀಡಿಲ್ಲ. ನನ್ನ ಸೋರ್ಸ್ ವರದಿಗೆ ಪೂರಕವಾಗುವಂತೆ ನಾನು ಆರೋಪಿತರಿಗೆ ಸೇರದ ಆಸ್ತಿಯನ್ನು ಕೂಡ ಸೇರಿಸಿ ಆಸ್ತಿಯ ಮೌಲ್ಯವನ್ನು ಹೆಚ್ಚಾಗಿ ತೋರಿಸಿ ಮತ್ತು ಖರ್ಚನ್ನು ಹೆಚ್ಚಾಗಿ ತೋರಿಸಿ ಆದಾಯವನ್ನು ಕಡಿಮೆ ತೋರಿಸಿರುತ್ತೇನೆ ಎಂದರೆ ಸರಿಯಲ್ಲ.

3.ನನ್ನ ತನಿಖಾ ಕಾಲದಲ್ಲಿ ಆರೋಪಿತರಿಗೆ ಆದಾಯಕ್ಕಿಂತ ಹೆಚ್ಚಿನ ಆಸ್ತಿ ಇತ್ತು ಎನ್ನುವ ಬಗ್ಗೆ ಯಾವುದೇ ಸಾಕ್ಷ್ಯ ಸಿಗಲಿಲ್ಲ ಎಂದರೆ ಸಾಕ್ಷಿಯು ಸೋರ್ಸ್ ವರದಿ ಬಿಟ್ಟರೆ ಬೇರೆ ಯಾವುದೇ ಸಾಕ್ಷ್ಯ ನನಗೆ ಸಿಕ್ಕಿರುವುದಿಲ್ಲ ಎನ್ನುತ್ತಾರೆ.

<u>ಮರು ವಿಚಾರಣೆಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**